1993ರ ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ (ತಿದ್ದುಪಡಿ) ವಿಧೇಯಕ ಪರ್ಯಾಲೋಚನಾ ಪ್ರಸ್ತಾವ

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾರ್ಮಿಕ ಸಚಿವರು) : ಸನ್ಮಾನ್ಯ ಉಪಾಧ್ಯಕ್ಷರೇ, 1993ರ ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾರ್ಮಿಕ ಸಚಿವರು) : ಸನ್ಮಾನ್ಯ ಉಪಾಧ್ಯಕ್ಷರೇ, ಈ ತಿದ್ದುಪಡಿಯನ್ನು ಏಕೆ ತಂದೆವೆಂದರೆ, ನಮಗೆ ಈಗ ಬರುತ್ತಿರುವ ವಂತಿಕೆಯು ಎಲ್ಲಾ ಕಾರ್ಮಿಕರ ಕಲ್ಯಾಣವನ್ನು ಮಾಡುವುದಕ್ಕೆ ಸಾಕಾಗುವುದಿಲ್ಲ, ನಮ್ಮ ಖರ್ಚು ಬಹಳಷ್ಟು ಜಾಸ್ತಿಯಾಗಿದೆ. ಆದರೆ ಆದಾಯ ಕಡಿಮೆ ಇದ್ದು, ಖರ್ಚು ಜಾಸ್ತಿಯಾಗಿರುವ ಕಾರಣ ನಾವು ವಂತಿಕೆಯಲ್ಲಿ ಸ್ವಲ್ಪ ಏರಿಕೆಯನ್ನು ಮಾಡಿದ್ದೇವೆ. ಈ ತಿದ್ದುಪಡಿಯನ್ನು ತರುವ ಮೊದಲು ನಾವು ಕಾರ್ಮಿಕರಿಂದ ಒಂದು ರೂಪಾಯಿ, ಎಂಪ್ಲಾಯರ್‌ನಿಂದ ಎರಡು ರೂಪಾಯಿ, ಸರ್ಕಾರದಿಂದ ಒಂದು ರೂಪಾಯಿಯನ್ನು ವಸೂಲಿ ಮಾಡುತ್ತಿದ್ದೆವು. ಆದರೆ ನಾವು ಈಗ ವಿಧೇಯಕಕ್ಕೆ ತಿದ್ದುಪಡಿಯನ್ನು ತಂದು ಎಂಪ್ಲಾಯ್‌ನಿಂದ ಮೂರು ರೂಪಾಯಿ, ಎಂಪ್ಲಾಯರ್‌ನಿಂದ ಆರು ರೂಪಾಯಿ, ಸರ್ಕಾರದಿಂದ ಮೂರು ರೂಪಾಯಿಗಳನ್ನು ವಸೂಲಿ ಮಾಡುತ್ತೇವೆ. ಅದೇ ರೀತಿ ನಾವು ಈ ವಿಧೇಯಕಕ್ಕೆ ಒಂದು ತಿದ್ದುಪಡಿಯನ್ನು ಸಹ ತಂದಿದ್ದೇವೆ. ಅದರಂತೆ 1992 ರಿಂದ ಜಾರಿಗೆ ಬರುವ ಈ ಬಿಲ್ಲನ್ನು 1993ರಿಂದ ಜಾರಿಗೆ ಬರುತ್ತದೆಂದು ತಿದ್ದುಪಡಿ ಮಾಡಿದ್ದೇವೆ. ಏಕೆಂದರೆ 1992 ರಿಂದ ಈ ವಿಧೇಯಕವನ್ನು ಜಾರಿಗೆ ತರಲು ಆಗುವುದಿಲ್ಲ, ಇದನ್ನು 1993ರಲ್ಲಿ ಜಾರಿಗೆ ತಂದಿರತಕ್ಕದ್ದು. ಈಗ ಫೆಬ್ರವರಿ ಆದ ಕಾರಣ 1992ನೇ ವರ್ಷದಿಂದ ಅದನ್ನು ವಸೂಲಿ ಮಾಡುವುದಕ್ಕೆ ಸಾಧ್ಯ ಇಲ್ಲ, ಆ ಕಾರಣ ಈ ಒಂದು ತಿದ್ದುಪಡಿಯನ್ನು ತಂದಿದ್ದೇವೆ. ಅದನ್ನು ಸರ್ವಾನುಮತದಿಂದ ಅಂಗೀಕರಿಸಬೇಕೆಂದು ವಿನಂತಿಸುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ, '1993ರ ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು'.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2

ಉಪಾಧ್ಯಕ್ಷರು : "ಖಂಡ ಎರಡು ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1ಕ್ಕೆ ತಿದ್ದುಪಡಿ

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾರ್ಮಿಕ ಸಚಿವರು) :ಸನ್ಮಾನ್ಯ ಉಪಾಧ್ಯಕ್ಷರೇ, "ಒಂದನೇ ಖಂಡದಲ್ಲಿನ ಎರಡನೆ ಪ್ರಕಟಣೆಯಲ್ಲಿರುವ 1992 ಎಂಬ ಅಂಕೆಗಳಿಗೆ ಬದಲಾಗಿ 1993 ಎಂಬ ಅಂಕೆಗಳನ್ನು ಪ್ರಯೋಗಿಸಬೇಕು" - ಎನ್ನತಕ್ಕ ತಿದ್ದುಪಡಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

(ಪ್ರಸ್ತಾವ ಮಂಡಿಸಲ್ಪಟ್ಟಿತು)

ಉಪಾಧ್ಯಕ್ಷರು : ಪ್ರಶ್ನೆ ಏನೆಂದರೆ "ಒಂದನೇ ಖಂಡದಲ್ಲಿನ ಎರಡನೇ ಪ್ರಕಟಣೆಯಲ್ಲಿರುವ 1992 ಎಂಬ ಅಂಕೆಗಳಿಗೆ ಬದಲಾಗಿ 1993 ಎಂಬ ಅಂಕೆಗಳನ್ನು ಪ್ರಯೋಗಿಸುವುದು"

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು)

ಖಂಡ 1 ತಿದ್ದುಪಡಿಯಾದ ರೀತಿಯಲ್ಲಿ :

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ 'ಮೊದಲನೆ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ತಿದ್ದುಪಡಿಯಾದ ರೀತಿಯಲ್ಲಿ ಈ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಮೊದಲನೆ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ತಿದ್ದುಪಡಿಯಾದ ರೀತಿಯಲ್ಲಿ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು).

ಪ್ರಸ್ತಾವದ ಅಂಗೀಕಾರ

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾರ್ಮಿಕ ಸಚಿವರು) : ಸನ್ಮಾನ್ಯ ಉಪಾಧ್ಯಕ್ಷರೇ, 1993ರ ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿಯಾದ ರೀತಿಯಲ್ಲಿ ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ "1993ರ ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿಯಾದ ರೀತಿಯಲ್ಲಿ ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ವಿತ್ತೀಯ ಕಾರ್ಯಕಲಾಪಗಳು

1985-86ನೇ ಆರ್ಥಿಕ ವರ್ಷಕ್ಕೆ ಸಂಬಂಧಪಟ್ಟ ಹೆಚ್ಚುವರಿ ಅನುದಾನಗಳ ಅಭಿಯಾಚನೆ ಮೇಲೆ ಚರ್ಚೆ ಹಾಗೂ ಮತಕ್ಕೆ ಹಾಕುವುದು

+ ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಉಪಾಧ್ಯಕ್ಷರೆ, 1985-86ನೇ ಸಾಲಿನಲ್ಲಿ ತಗುಲಿರತಕ್ಕಂಥ ಖರ್ಚುಗಳ ಬಗ್ಗೆ ಪುರಸ್ಕೃತ ಅನುದಾನಗಳಿಗೆ ಮತ್ತು ಪ್ರವೃತ್ತ ವಿನಿಯೋಗಗಳಿಗೆ ಹೆಚ್ಚಿಗೆ ವ್ಯಯವಾದ ವೆಚ್ಚಗಳನ್ನು ತುಂಬುವುದಕ್ಕಾಗಿ ಅನುದಾನಕ್ಕಾಗಿ ಬೇಡಿಕೆಯನ್ನು ಮಂಡಿಸುತ್ತಿದ್ದೇನೆ. ಆ ವರ್ಷದ ರಾಜಸ್ವ ಖಾತೆಯಲ್ಲಿ 5,65,32,672 ಕೋಟಿ ರೂಪಾಯಿಗಳು ಮತ್ತು ಬಂಡವಾಳ ಖಾತೆಯಲ್ಲಿ 5,55,32,533 ಕೋಟಿ ರೂಪಾಯಿಗಳು ಹಾಗೂ ಪ್ರಭೃತ್ತ ಬಾಬಿನ ರಾಜಸ್ವ ಖಾತೆಯಲ್ಲಿ 96,30,57,903ಕೋಟಿ ರೂಪಾಯಿಗಳನ್ನು ಒಟ್ಟಾರೆ 107,51,23,108ಕೋಟಿ ರೂಪಾಯಿಗಳ ಹೆಚ್ಚುವರಿ ಮೊಬಲಗಿನ ಅನುದಾನಕ್ಕಾಗಿ ಬೇಡಿಕೆಗಳನ್ನು ವಿಧಾನಸಭೆಯಲ್ಲಿ ಮಂಡಿಸಲಾಗಿದೆ. ಈ ಬೇಡಿಕೆಗಳನ್ನು ಇದಕ್ಕೆ ಜೋಡಿಸಿದ ಪಟ್ಟಿಯಲ್ಲಿ ತೋರಿಸಲಾಗಿದ್ದು ಕೆಲವು ಸೇವೆಗಳಿಗೆ ಮಂಜೂರು ಮಾಡಿದ ಮೊಬಲಗಿಗಿಂಥ ಹೆಚ್ಚಿಗೆ 1985-86ರ ಆರ್ಥಿಕ ವರ್ಷದಲ್ಲಿ ಈ ಸೇವೆಗಳಿಗೆ ವಹಿಸಿದ ವೆಚ್ಚವನ್ನು ಕ್ರಮವಾಗಿಸಲು ಉದ್ದೇಶಿಸಲಾಗಿದೆ. ಈ ಹೆಚ್ಚುವರಿ ಬಾಬ್ತುಗಳ ಸಂಕ್ಷಿಪ್ತ ವಿವರಗಳನ್ನು ಪಟ್ಟಿಯಲ್ಲಿ ತೋರಿಸಲಾಗಿದೆ. 1985-86ರಲ್ಲಿ ಆಯವ್ಯಯಕ್ಕಿಂಥ ಹೆಚ್ಚಿಗೆ ಖರ್ಚಾಗಿರುವುದನ್ನು ಈ ಸದನದ ಅನುಮೋದನೆಗಾಗಿ ತಮ್ಮ ಮುಂದೆ ಮಂಡಿಸುತ್ತಿದ್ದೇನೆ. ಈ ಸದನದ ಅಭಿಪ್ರಾಯ ಕೇಳುತ್ತೇನೆ.